ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಮಹಾರಾಷ್ಟ್ರದಲ್ಲಿ ಭಾರೀ ಮಳೆ : 16 ಮಂದಿ ಸಾವು

ಮಹಾರಾಷ್ಟ್ರದಲ್ಲಿ ರಾತ್ರಿಯಿಡೀ ಸುರಿದ ಭಾರೀ ಮಳೆಗೆ ಕನಿಷ್ಠ 16 ಮಂದಿ ಮೃತಪಟ್ಟಿದ್ದಾರೆ. ಮಹಾರಾಷ್ಟ್ರದ ಪಶ್ಚಿಮ ಕರಾವಳಿ ಭಾಗದಲ್ಲಿ ಶನಿವಾರ ಭಾರೀ ಮಳೆಯಾಗಿದೆ. ಮುಂಬೈ ಸುತ್ತಮುತ್ತಲಿನ ಥಾಣೆ, ರಾಯಘಡ ಮತ್ತು ಪಾಲ್ಘರ್ ಜಿಲ್ಲೆಗಳಲ್ಲಿ ಗುಡುಗು ಮಿಂಚು ಸಹಿತ ಭಾರಿ ಮಳೆ ಸುರಿದಿದೆ.



'ಸಾಮಾಜಿಕ ಮಾಧ್ಯಮಗಳು ಕಾಶ್ಮೀರಿ ಯುವಕರನ್ನು ತಪ್ಪು ದಾರಿಗೆಳೆಯುತ್ತಿವೆ'

ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿ ನೀಡುವ ಮೂಲಕ ಜಮ್ಮು ಮತ್ತು ಕಾಶ್ಮೀರದ ಯುವಕರನ್ನು ತಪ್ಪು ದಾರಿಗೆಳೆಯಲಾಗುತ್ತಿದೆ ಎಂದು ಸೇನಾ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅವರು ಶನಿವಾರ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮಗಳು ಕಾಶ್ಮೀರಿ ಯುವಕರ ದಾರಿ ತಪ್ಪಿಸುತ್ತಿದ್ದು , ಇದನ್ನು ತಡೆಯಲು ಭದ್ರತಾ ಪಡೆಗಳು ಸೂಕ್ತ ಮಾರ್ಗವನ್ನು ಕಂಡುಕೊಂಡಿವೆ ಎಂದಿದ್ದಾರೆ.

ಬ್ರಿಟನ್ ಸಂಸತ್ತಿಗೆ ಇನ್ಫೋಸಿಸ್ ನಾರಾಯಣಮೂರ್ತಿ ಅಳಿಯ ಮರು ಆಯ್ಕೆ

ಇನ್ಫೋಸಿಸ್ ಸಂಸ್ಥಾಪಕ, ಬೆಂಗಳೂರು ಮೂಲದ ಎನ್.ಆರ್.ನಾರಾಯಣಮೂರ್ತಿ ಅವರ ಅಳಿಯ ರಿಷಿ ಸುನಕ್ ಅವರು ಬ್ರಿಟನ್ ಸಂಸತ್ತಿಗೆ ಮರು ಆಯ್ಕೆಯಾಗಿದ್ದಾರೆ. ಇತ್ತೀಚಿಗೆ ನಡೆದ ಬ್ರಿಟನ್ ಸಾರ್ವತ್ರಿಕ ಚುನಾವಣೆಯಲ್ಲಿ ಕನ್ಸರ್‌ವೇಟಿವ್ ಪಕ್ಷದಿಂದ ಸ್ಪರ್ಧಿಸಿದ್ದ ಹಾಲಿ ಸಂಸದ ರಿಷಿ ಸುನಕ್ ಅವರು ಲೇಬರ್ ಪಕ್ಷದ ಅಭ್ಯರ್ಥಿ ಡ್ಯಾನ್ ಪೆರ್ರಿ ಅವರ ವಿರುದ್ಧ 23 ಸಾವಿರ ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :214 ಭಾನುವಾರ ಜೂ.11, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಬೇರೆಯವರ ದುಡ್ಡು ಮುಟ್ಟಲ್ಲ : ಹೆಚ್.ಡಿ.ದೇವೇಗೌಡ

ಬೆಂಗಳೂರು : ಬೇರೆಯವರ ದುಡ್ಡು ಈವರೆಗೂ ಮುಟ್ಟಿಲ್ಲ. ನನ್ನ ಬಳಿ ದೊಡ್ಡ ಆಸ್ತಿಯೂ ಇಲ್ಲ ಎಂದು ಮಾಜಿ ಪ್ರಧಾನಿ ಹಾಗೂ ಹಾಸನ ಜಿಲ್ಲೆಯ ಸಂಸದ ಹೆಚ್.ಡಿ.ದೇವೇಗೌಡ ಹೇಳಿದರು.

ಖಾಸಗಿ ವಾಹಿನಿಯಲ್ಲಿ ಶನಿವಾರ ಬಿತ್ತರವಾದ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಮಾಜಿ ಪ್ರಧಾನಿಯಾಗಿದ್ದರೂ ನನ್ನ ಬ್ಯಾಂಕ್ ಖಾತೆಯಲ್ಲಿ ಬರೀ 18 ಲಕ್ಷ ರೂ. ಹಣವಿದೆ ಎಂದರು. ಮಾಜಿ ಪ್ರಧಾನಿ ನಾನೊಬ್ಬನೇ. ಈಗಲೂ ಕ್ರಿಯಾಶೀಲವಾಗಿದ್ದೇನೆ. ಈ ದೇವೇಗೌಡ ಏನು ಮಾಡುತ್ತಾನೆ ಎಂದು ಪ್ರಧಾನಿ ನರೇಂದ್ರ ಮೋದಿ ನೋಡುತ್ತಿರುತ್ತಾರೆ. ಬಹಳ ನೋವನ್ನು ಉಂಡಿದ್ದೇನೆ. ಎಮರ್ಜೆನ್ಸಿಯಲ್ಲಿ ನನಗೆ ಜೈಲಿಗೂ ಹಾಕಿದ್ದರು ಎಂದರು.

ಚಂದ್ರಶೇಖರ್ ಹೇಳಿದ್ದಕ್ಕೇ ಒಪ್ಪಿಕೊಂಡಿದ್ದು ....

ರಾಮಕೃಷ್ಣ ಹೆಗಡೆ ಆಗ ಎಂ.ಎಲ್.ಎ. ಆಗಿರಲಿಲ್ಲ. ಅವರು ಸಿ.ಎಂ. ಆಗಲು ನನಗೆ ಫೋನ್ ಮಾಡಿದ್ದರು. ಮಾಜಿ ಪ್ರಧಾನಿ ಚಂದ್ರಶೇಖರ್ ಅವರು ಹೇಳಿದ್ದಕ್ಕೇ ನಾನು ಒಪ್ಪಿಕೊಂಡಿದ್ದೆ. ನಂತರದ ದಿನಗಳಲ್ಲಿ ನನ್ನ ವಿರುದ್ಧ ಲೋಕಾಯುಕ್ತ ತನಿಖೆ ನಡೆಯಿತು. ದೇವೇಗೌಡರನ್ನು ಹೇಗೆ ಮುಗಿಸಬೇಕೆಂಬ ಲೆಕ್ಕಾಚಾರವೂ ನಡೆಯಿತು. ಹಾಸನ ಜಿಲ್ಲೆಗೆ ಸಿಓಡಿ ತಂಡ ಕಳಿಸಿ ತನಿಖೆ ನಡೆಸಲಾಯಿತು ಎಂದು ನೋವಿನಿಂದ ಹೇಳಿಕೊಂಡರು.

ನಾನು ಬದುಕಿದ್ದಾಗಲೇ ನೋಡಬೇಕಾ?

ನಾನು ಬದುಕಿದ್ದಾಗಲೇ ಇವೆಲ್ಲವನ್ನೂ ನೋಡಬೇಕೆಂಬ ಕೊರಗು ನನಗೆ ಇದೆ. ಜನರು ಕುಡಿಯುವ ನೀರಿಲ್ಲದೆ ತೊಂದರೆಗೊಳಗಾಗಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಎಐಡಿಎಂಕೆ ಹಾಗೂ ಡಿ.ಎಂ.ಕೆ.ಯವರಿಗೆ ಕುಡಿಯಲಾದರೂ ನೀರು ಬಿಡಿ ಎಂದು ಕೋರಿದ್ದೆ. ಹೌಸ್‌ನಲ್ಲಿ ನನ್ನ ಎದುರು ಲೋಟದಲ್ಲಿ ನೀರು ಇಟ್ಟಿದ್ದರು. ಕೈ ನಡುಗುತ್ತಿತ್ತು. ಆ ನೀರಿಗಾಗಿಯೇ ಕೇಳಿದ್ದೆ ಎಂದು ದೇವೇಗೌಡರು ತಿಳಿಸಿದರು.

ನಾನು ದೃಶ್ಯಮಾಧ್ಯಮಗಳಲ್ಲಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವುದನ್ನು ನೋಡಿದ್ದೇನೆ. ಇದನ್ನೆಲ್ಲಾ ನೋಡಿದಾಗ ನಾನು ಬದುಕಿದ್ದಾಗಲೇ ಇದೆಲ್ಲಾ ಆಗುತ್ತಿದೆಯಲ್ಲ ಎಂಬ ಅಸಮಾಧಾನವೂ ಇದೆ ಎಂದರು.

ಹಾಕಿ ಸ್ಟಿಕ್ ಎರಡು ತುಂಡಾಗಿತ್ತು

ನಾನು 1948-49ರಲ್ಲಿ ಎಲ್.ವಿ. ಪಾಲಿಟೆಕ್ನಿಕ್‌ನ ವಿದ್ಯಾರ್ಥಿಯಾಗಿದ್ದೆ. ಸುಬ್ಬರಾಮಯ್ಯ ಆಗ ಡಿಎಂಓ ಆಗಿದ್ದರು. ಅವರ ಮಗ ನೀಲಕಂಠರಾವ್ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದರು. ನಾನು ನನ್ನ ಸ್ನೇಹಿತರು ಹಾಕಿ ಆಟವಾಡುತ್ತಿದ್ದೆವು. ಆಗ ವಿದ್ಯಾರ್ಥಿ ಸಂಘದ ಚುನಾವಣೆ ಕುರಿತು ಕೆಲವರು ಮಾತನಾಡಿದರು.

ಆ ಸಂದರ್ಭದಲ್ಲಿ ನೀಲಕಂಠರಾವ್ ನನ್ನನ್ನು ಬಿಟ್ಟರೆ ಬೇರೆ ಯಾರು ಸ್ಪರ್ಧಿಸುತ್ತಾರೆ ಎಂದು ದುರಹಂಕಾರವಾಗಿ ಮಾತನಾಡಿದ್ದರು. ಮಾತಿಗೆ ಮಾತು ಬೆಳೆದಿತ್ತು. ಆಗ ನಾನು ಬಹಳ ಕೋಪಿಷ್ಠ. ಹಾಕಿ ಸ್ಟಿಕ್‌ನಿಂದ ಅವರಿಗೆ ಹೊಡೆದು ಎರಡು ತುಂಡಾಯಿತು. ಆಗ ಸೂಪರಿಡೆಂಟ್ ಆಗಿದ್ದ ನರಸಿಂಹನ್ ನನಗೆ ಎಚ್ಚರಿಕೆ ನೀಡಿದ್ದರು. ಎಲೆಕ್ಷನ್‌ಗೆ ನಿಂತೆ. ಚುನಾಯಿತನಾದೆ ಎಂದರು.

'ಚಕ್ರವರ್ತಿಯಾಗುತ್ತೇನೆ ಎಂದಿದ್ದರು'

ನಾನು ಆಗ ಮೂರು ವರ್ಷದ ಬಾಲಕ. ಬುಡುಬುಡಿಕೆಯವರು ನನ್ನ ತಾಯಿಗೆ ನಿನ್ನ ಮಗ ಚಕ್ರವರ್ತಿಯಾಗುತ್ತಾನೆ ಎಂದಿದ್ದರಂತೆ. ನನ್ನ ತಾಯಿ ಕೂಡ ಇದನ್ನು ಹೇಳುತ್ತಿದ್ದರು ಎಂದರು.

ಆ ಸಂದರ್ಭದಲ್ಲಿ ನನ್ನ ತಾಯಿ ಮೊಸರು ಕಡೆಯುತ್ತಿದ್ದರು. ಬುಡುಬುಡಿಕೆಯವರು ಮನೆಗೆ ಬಂದರು. ಆದರೆ ನಮ್ಮ ತಾಯಿಗೆ ತಿಳಿಯಲಿಲ್ಲ. ಆ ಬುಡುಬುಡಿಕೆಯವರು ಪಕ್ಕದ ಮನೆಗೆ ಹೋದರು. ಆ ವೇಳೆಗೆ ಎಚ್ಚರಗೊಂಡ ನನ್ನ ತಾಯಿ ಪಕ್ಕದ ಮನೆಗೆ ಹೋಗಿ ಬುಡುಬುಡಿಕೆಯವರನ್ನು ಕರೆದು ಕ್ಷಮೆ ಕೋರಿ ಭಿಕ್ಷೆ ನೀಡಿದರು ಎಂದರು.

ಚಕ್ರವರ್ತಿಯಾಗುತ್ತಾನೆ ಎಂದಾಗ ನನ್ನ ದೊಡ್ಡಮ್ಮ ಇವನಿಗೆಲ್ಲಿ ಆ ಯೋಗವಿದೆ ಎಂದು ಮೂದಲಿಸಿದ್ದರು. ಆದರೆ ನನ್ನ ತಂದೆ-ತಾಯಿ ಆಶೀರ್ವಾದ, ದೈವಾನುಗ್ರಹ ಎಲ್ಲವನ್ನೂ ಕಲ್ಪಿಸಿತು ಎಂದರು.

☐ ನಾನು ಆಗ ವಿರೋಧ ಪಕ್ಷದ ನಾಯಕ. ಬೆಂಗಳೂರಿನಲ್ಲಿ ಬಾಡಿಗೆ ಮನೆ ಕೂಡ ಕೊಡುತ್ತಿರಲಿಲ್ಲ. ಹೇಗೋ ಬಾಡಿಗೆ ಮನೆ ಮಾಡಿಕೊಂಡು ಇದ್ದೆ. ತಿಂಗಳಿಗೆ 200 ರೂಪಾಯಿ ಬಾಡಿಗೆ ಇತ್ತು. ಮೊದಲ ಬಾರಿ ಚುನಾವಣೆಗೆ ನಿಂತಾಗ ಜನರಲ್ ಹಾಸ್ಟೆಲ್‌ನಲ್ಲಿ ಇದ್ದೆ ಎಂದು ದೇವೇಗೌಡರು ಹಿಂದಿನ ದಿನಗಳನ್ನು ಮೆಲುಕು ಹಾಕಿದರು.

ಅಂಥ ದಿನ ಕರ್ನಾಟಕದಲ್ಲಿ ಬರೋಲ್ಲ

ಅಂಥ ದಿನ ಕರ್ನಾಟಕದಲ್ಲಿ ಬರೋಲ್ಲ. ದೇವರಾಜ ಅರಸು ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದರು. ಆಗ ನಾನು ಪ್ರತಿಪಕ್ಷದ ನಾಯಕ. ಅರಸು ಬಹಳ ದೊಡ್ಡ ಮನುಷ್ಯರು ಎಂದು ದೇವೇಗೌಡರು ನುಡಿದರು.

ಮುಖ್ಯಮಂತ್ರಿಯಾಗಿದ್ದ ವೇಳೆ ಅರಸು ಅವರು ನನಗೆ ಬೆಳಗಿನ ಜಾವ 5 ಗಂಟೆಗೆ ಫೋನ್ ಮಾಡಿ ಇವೊತ್ತು ಏನು ಸಬ್ಜೆಕ್ಟ್ ಇದೆ ಹೇಳಿ, ಅದಕ್ಕೆ ತಯಾರಾಗುತ್ತೇನೆ ಎಂದು ಕೇಳುತ್ತಿದ್ದರು ಎಂದು ಹಿಂದಿನ ರಾಜಕೀಯ ಬುತ್ತಿಯನ್ನು ಬಿಚ್ಚಿಟ್ಟರು.

ಒಂದು ದಿನ ನನ್ನನ್ನು ಕರೆದು ರಾಜಕಾರಣ ಕುರಿತು ಮಾತನಾಡಿದ್ದರು. ಏನಾದರಾಗಲಿ ಮನೆ ಮಾಡಿಕೊಳ್ಳಿ ಎಂದು ಹಣ ಕೊಟ್ಟರು. ಅದು ದೊಡ್ಡ ಪ್ರಮಾಣದ್ದಾಗಿರಲಿಲ್ಲ. ಆಗ ನಾನು ದೇವರಾಜ ಅರಸು ಅವರಿಗೆ ಈ ಹಣ ಮುಟ್ಟಿದರೆ ನನ್ನ ಶರೀರ ಮಾರಿದಂತಾಗುತ್ತದೆ. ನೀವು ನನ್ನನ್ನು ದಾರಿ ತಪ್ಪಿಸಬೇಡಿ ಎಂದು ಹೇಳಿದ್ದೆ ಎಂದು ವಿವರಿಸಿದರು.

ಪೆನ್‌ಷನ್ ಹಣವನ್ನು ನಾನು ಈಗಲೂ ತೆಗೆದುಕೊಳ್ಳುತ್ತಿಲ್ಲ. ಎಂ.ಎಲ್.ಎ., ಎಂ.ಪಿ. ಆಗಿದ್ದೇನೆ. ಆದರೂ ಈಗಲೂ ಪೆನ್‌ಷನ್ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಿದರು.

ಲಿಂಗಾಯಿತರು, ಒಕ್ಕಲಿಗರ ಸರ್ಕಾರವಲ್ಲ

ಇದು ಲಿಂಗಾಯಿತರು ಹಾಗೂ ಒಕ್ಕಲಿಗರ ಸರ್ಕಾರವಲ್ಲ . ಹಿಂದುಳಿದವರು, ಆರ್ಥಿಕ ದುರ್ಬಲರ ಸರ್ಕಾರ ಎಂದು ದೇವೇಗೌಡರು ಹೇಳಿದ್ದರೆಂದು ಮಾಜಿ ಸಚಿವೆ ಬಿ.ಟಿ.ಲಲಿತನಾಯಕ್ ನೆನಪಿಸಿಕೊಂಡರು.

ದೇವೇಗೌಡರು ಸಿ.ಎಂ. ಆಗಿದ್ದಾಗ ಬಿ.ಟಿ.ಲಲಿತನಾಯಕ್ ಅವರು ಸಚಿವೆಯಾಗಿದ್ದರು. ದೇವೇಗೌಡರು ಪೂರ್ಣಾವಧಿ ಪ್ರಧಾನಿ ಆಗಿದ್ದರೆ ಕರ್ನಾಟಕ ರಾಜ್ಯಕ್ಕೆ ಇನ್ನಷ್ಟು ಅನುಕೂಲವಾಗುತ್ತಿತ್ತು. ರೈತರ ಬಗ್ಗೆ ಅವರು ಅಪಾರ ಅನುಕಂಪ ಹೊಂದಿದ್ದರು. ಕೃಷ್ಣ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಸಾರ್ವಜನಿಕರಿಂದ ದೇಣಿಗೆ ಪಡೆದಿದ್ದರು ಎಂದು ಸ್ಮರಿಸಿದರು.

ಆತ್ಮಸಾಕ್ಷಿಗೆ ದ್ರೋಹ ಮಾಡದೆ ಕೆಲಸ ಮಾಡಿ

ಸಾಹಿತಿ, ಜಾನಪದ ತಜ್ಞ ಚಂದ್ರು ಕಾಳೇನಹಳ್ಳಿ ಸಲಹೆ

> **"ಪೋಷಕರು ತಮ್ಮಲ್ಲಿನ ಆಸೆ, ಕನಸುಗಳನ್ನು ಮಕ್ಕಳ ಮೇಲೇರಿ ವೈದ್ಯರು, ಎಂಜಿನಿಯರ್ ಆಗಬೇಕೆಂದು ಒತ್ತಡ ಹೇರುತ್ತಿದ್ದಾರೆ. ಮಕ್ಕಳನ್ನು ಬೆಳೆಸುವ ರೀತಿಯಲ್ಲಿಯೇ ಬದಲಾವಣೆಯಾಗುತ್ತಿದೆ.**
>
> **-ಚಂದ್ರು ಕಾಳೇನಹಳ್ಳಿ, ಜಾನಪದ ತಜ್ಞ**

ಚನ್ನರಾಯಪಟ್ಟಣ : ಎಲ್ಲರೂ ಆಯಾ ಕ್ಷೇತ್ರದಲ್ಲಿ ಕಾಯಾ ವಾಚಾ, ಮನಸಾ ಎಂಬಂತೆ ನಿಷ್ಠರಾಗಿ ಕೆಲಸ ಮಾಡಿದರೆ ಜಯ ಸಿಗುತ್ತದೆ. ಯಾರೂ ಆತ್ಮಸಾಕ್ಷಿಗೆ ದ್ರೋಹ ಮಾಡದೆ ಕೆಲಸ ನಿರ್ವಹಿಸಬೇಕೆಂದು ಸಾಹಿತಿ ಹಾಗೂ ಜಾನಪದ ತಜ್ಞ ಚಂದ್ರು ಕಾಳೇನಹಳ್ಳಿ ತಿಳಿಸಿದರು.

ಅವರು ಪಟ್ಟಣದ ವೈದ್ಯ ಸ್ಕೂಲ್ ಆಫ್ ನರ್ಸಿಂಗ್ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ವೈದ್ಯೋತ್ಸವದಲ್ಲಿ ಪ್ರಥಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳಿಗೆ ದೀಪ ಪ್ರಜ್ವಲನ ಹಾಗೂ ಪ್ರತಿಜ್ಞಾ ವಿಧಿ ಬೋಧನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

(-4ನೇ ಪುಟಕ್ಕೆ)

ಕಾನೂನು ನೆರವು ಮಧ್ಯಸ್ಥಿಕೆ : ಇತರೆ ರಾಷ್ಟ್ರಗಳಿಗೂ ಮಾದರಿ

> **"ಲೋಕ ಅದಾಲತ್‌ನಲ್ಲಿ ವಕೀಲರ ಸ್ವಯಂಪ್ರೇರಿತ ಪಾಲ್ಗೊಳ್ಳುವಿಕೆಯು ಸಕ್ರಿಯತೆಯನ್ನು ಹೆಚ್ಚಿಸುತ್ತದೆ. ಇದರಿಂದ ಸಮಯ ಹಾಗೂ ಸಂಬಂಧವೂ ಉಳಿಯುತ್ತದೆ.**
>
> **ನ್ಯಾ॥ಜಯಂತ್ ಪಟೇಲ್**

ಹಾಸನ : ರಾಜಿ ತೀರ್ಮಾನ ಹಾಗೂ ಮಧ್ಯಸ್ಥಿಕಾ ಸೌಲಭ್ಯ ಭಾರತ ನ್ಯಾಯಾಂಗದಲ್ಲಿನ ಅತ್ಯುತ್ತಮ ವ್ಯವಸ್ಥೆಯಾಗಿದೆ . ಇದು ಇತರೆ ರಾಷ್ಟ್ರಗಳಿಗೂ ಮಾದರಿಯಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ನ್ಯಾ॥ ಜಯಂತ್ ಪಟೇಲ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಹಾಸನ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಮಾಸಿಕ ಲೋಕ್ ಅದಾಲತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಉಚಿತವಾಗಿ ಕಾನೂನು ನೆರವು ಮತ್ತು ಮಧ್ಯಸ್ಥಿಕಾ ವ್ಯವಸ್ಥೆ ಕಲ್ಪಿಸಿರುವುದು ಇತರ ರಾಷ್ಟ್ರಗಳಿಗೂ ಮಾದರಿಯಾಗಿದೆ ಎಂದು ಹೇಳಿದರು.

(-4ನೇ ಪುಟಕ್ಕೆ)

ಅಡುಗೆ ಅನಿಲ ಸೋರಿಕೆ : ಮೂವರು ಮಹಿಳೆಯರಿಗೆ ಗಾಯ

ಹಾಸನ: ನಗರದ ನಿಂಗೇಗೌಡನ ಕೊಪ್ಪಲಿನ ಮನೆಯೊಂದರಲ್ಲಿ ಗ್ಯಾಸ್ ಲೀಕ್ ಆದ ಪರಿಣಾಮ ಮನೆಯಲ್ಲಿದ್ದ ಮೂವರು ಮಹಿಳೆಯರಿಗೆ ಬೆಂಕಿ ತಗುಲಿ ಸಣ್ಣಪುಟ್ಟ ಸುಟ್ಟಗಾಯಗಳಾಗಿವೆ.

ಮನೆಯಲ್ಲಿ ಗ್ಯಾಸ್ ಲೀಕ್ ಆಗಿದ್ದರಿಂದ ಮನೆಯೆಲ್ಲಾ ವಾಸನೆಯಿಂದ ಕೂಡಿತ್ತು. ಆ ಸಮಯದಲ್ಲಿ ಮನೆಯಲ್ಲಿ ಯಾರೂ ಇರಲಿಲ್ಲ. ಮನೆಗೆ ಹಿಂದಿರುಗಿದ ನಯನ(37), ನಾಗರತ್ನ(46), ನಂಜಮ್ಮ(60) ಎಂಬುವವರು ಗ್ಯಾಸ್ ವಾಸನೆಯನ್ನು ಗಮನಿಸಿ ಕೂಡಲೇ ಅದನ್ನು ಆಫ್ ಮಾಡಿದ್ದಾರೆ. ಆದರೆ ದೇವರ ಕೋಣೆಯಲ್ಲಿ ಬೆಳಿಗ್ಗೆ ಪೂಜೆ ಮಾಡಿ ದೀಪ ಹಚ್ಚಿದ್ದರಿಂದ ದೀಪದ ಶಾಖಕ್ಕೆ ಗ್ಯಾಸ್ ಹೊತ್ತಿಕೊಂಡು ಆ ಮೂವರು ಮಹಿಳೆಯರಿಗೆ ಬೆಂಕಿ ತಗುಲಿದೆ. ಗಾಯಗೊಂಡ ಮಹಿಳೆಯರನ್ನು ನಗರದ ಸರ್ಕಾರಿ ಆಸ್ಪತ್ರೆಗೆ ಶನಿವಾರ ದಾಖಲಿಸಲಾಗಿದ್ದು , ಮೂವರಲ್ಲಿ ನಾಗರತ್ನ ಮತ್ತು ನಂಜಮ್ಮ ಎಂಬುವವರಿಗೆ ತೀವ್ರ ತರದ ಗಾಯಗಳಾಗಿವೆ.

ಮನೆಯಲ್ಲೆಲ್ಲಾ ಗ್ಯಾಸ್ ಆವರಿಸಿ ಬೆಂಕಿ ಹೊತ್ತಿಕೊಂಡ ಕ್ಷಣಾರ್ಧದಲ್ಲಿಯೇ ಹೆಂಚಿನ ಮನೆ ಬಹುತೇಕ ಸುಟ್ಟುಹೋಗಿದೆ.

ಭಾರತೀಯರು ಕ್ಷಮಾ ಗುಣಕ್ಕೆ ಹೆಸರುವಾಸಿ

ಗುರು ತೋರಿದ ದಾರಿ ತಿಂಗಳ ಮಾಮನ ತೇರು 46ನೇ ಹುಣ್ಣಿಮೆ ಕಾರ್ಯಕ್ರಮ

ಹಾಸನ : ಕ್ಷಮೆ ಮತ್ತು ಕ್ಷಮತೆ ಭಾರತೀಯ ಸಂಸ್ಕೃತಿಯ ಜೀವಾಳ ಎಂದು ತುಮಕೂರು ಹಿರೇಮಠದ ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದಲ್ಲಿ ಶುಕ್ರವಾರ ರಾತ್ರಿ ನಗರದ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲೆ ಸಿಬ್ಬಂದಿ ಪ್ರಾಯೋಜಕತ್ವದಲ್ಲಿ ನಡೆದ ಗುರು ತೋರಿದ ದಾರಿ ತಿಂಗಳ ಮಾಮನ ತೇರು 46ನೇ ಹುಣ್ಣಿಮೆ ಕಾರ್ಯಕ್ರಮದಲ್ಲಿ ಉತ್ತಿಷ್ಠ ಜಾಗ್ರತ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಬುದ್ಧಿ ಮತ್ತು ಜ್ಞಾನಕ್ಕೆ ಅತ್ಯಂತ ಉನ್ನತ ಸ್ಥಾನ ನೀಡಲಾಗಿದೆ. ಹಲವು ಪ್ರಥಮಗಳಿಗೆ ನಾಂದಿ ಹಾಡಿರುವ ಭಾರತೀಯರು ಮಹಾ ಬುದ್ಧಿವಂತರೆಂದು ವಿಶ್ವದೆಲ್ಲೆಡೆ ಮಾನ್ಯರಾಗಿದ್ದಾರೆ. ಅಪಾರ ಸಾಮರ್ಥ್ಯ ಉಳ್ಳವರಾಗಿರುವುದರಿಂದಲೇ ಕ್ಷಮಾ ಗುಣಕ್ಕೂ ಹೆಸರಾಗಿದ್ದಾರೆ ಎಂದು ನುಡಿದರು.

ಉತ್ತಿಷ್ಠ ಜಾಗ್ರತ ಎಂದರೆ ಎದ್ದೇಳು ಜಾಗೃತನಾಗು ಎಂದರ್ಥ. ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಅತ್ಯಂತ ಜನಪ್ರಿಯ ಹೇಳಿಕೆಯೂ ಇದೇ. ಲೌಕಿಕ ಜಂಜಡಗಳನ್ನು ಕೊಡವಿಕೊಂಡು ಎದ್ದು ಜಾಗೃತರಾದಾಗ ಮಾತ್ರ ಸಮಾಜಕ್ಕೆ ಉಪಯೋಗಿಯಾಗಿ ಬದುಕಲು, ಏನನ್ನಾದರೂ ಸಾಧಿಸಲು ಸಾಧ್ಯ. ಗಾಯತ್ರಿ ಮಂತ್ರದ ಅರ್ಥವೂ ಇದೇ. ನಮ ಧೀ ಅಂದರೆ ಬುದ್ಧಿಶಕ್ತಿಯನ್ನು ಪ್ರಚೋದಿಸು ಎಂಬುದಾಗಿ ಪ್ರಾರ್ಥಿಸುವುದೇ ಈ ಮಂತ್ರದ ಉದ್ದೇಶ ಎಂದರು.

ರಾಮನಿಂದ ಕಾಮದವರೆಗೆ ಪ್ರತಿಯೊಂದನ್ನೂ ಶಾಸ್ತ್ರೀಯವಾಗಿ ಅಧ್ಯಯನ ಮಾಡಿರುವ ಜಗತ್ತಿನ ಏಕೈಕ ಸಂಸ್ಕೃತಿ ನಮ್ಮದು. ವೇದ, ಆಗಮ, ಉಪನಿಷತ್ತುಗಳಂತಹ ಅಮೂಲ್ಯ ಜ್ಞಾನ ಭಂಡಾರವನ್ನು ಬೇರಾವ ಸಂಸ್ಕೃತಿಯಲ್ಲೂ ಕಾಣಲು ಸಾಧ್ಯವಿಲ್ಲ. ಕುರುಕ್ಷೇತ್ರ ಯುದ್ಧದ ಸಂದರ್ಭದಲ್ಲಿ ಖಿನ್ನತೆಗೆ ಒಳಗಾಗಿದ್ದ ಅರ್ಜುನನಿಗೆ ಗೀತೆಯನ್ನು ಬೋಧಿಸಿದ ಕೃಷ್ಣ ಜಗತ್ತಿನ ಶ್ರೇಷ್ಠ ಮನೋ ವಿಜ್ಞಾನಿ. ಪ್ರತಿಯೊಬ್ಬರೂ ಭಗವದ್ಗೀತೆಯನ್ನು ಓದಿ ಮನನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಸುಖ ನಿದ್ರೆಗೆ ತಲೆ ಕೆಳಗೆ ದಿಂಬು ಇಲ್ಲದಿದ್ದರೂ ಚಿಂತೆ ಇಲ್ಲ, ಆದರೆ ತಲೆ ಒಳಗೆ ದೊಂಬಿ ಇರಬಾರದು, ಮನಸ್ಸಿಗೆ ನಾವು ಪಾಠ ಮಾಡಿದರೆ ಯೋಗ, ಮನಸ್ಸು ನಮಗೆ ಪಾಠ ಮಾಡಿದರೆ ರೋಗ, ಜನಿವಾರ, ಶಿವದಾರದ ಗೊಡವೆ ಇಲ್ಲದವನೇ ದಿಲ್ದಾರ ಮತ್ತಿತರ ಸ್ವರಚಿತ ಉಕ್ತಿಗಳನ್ನು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ , ನಮ್ಮ ಮಕ್ಕಳಿಗೆ ನಾವೇ ಆದರ್ಶವಾಗುವಷ್ಟರ ಮಟ್ಟಿಗೆ ಜಾಗೃತರಾಗಿ ಬದುಕಬೇಕು. ನಮ್ಮ ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುವುದೇ ಸಂಸ್ಕಾರ ಎಂದು ಕಿವಿಮಾತು ಹೇಳಿದರು.

ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರ ಸ್ವಾಮೀಜಿ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ಹುಣ್ಣಿಮೆ ಕಾರ್ಯಕ್ರಮಗಳ ಸಂಚಾಲಕ ಹೆಚ್.ಬಿ. ಮದನಗೌಡ, ಶ್ರೀಮಠದ ವ್ಯವಸ್ಥಾಪಕ ಹೆಚ್.ಕೆ.ಚಂದ್ರಶೇಖರ್ ಮತ್ತು ಉದ್ಯಮಿ ಶೇಷಾದ್ರಿ ಉಪಸ್ಥಿತರಿದ್ದರು.

ಮೊದಲಿಗೆ ಶ್ರೀ ಕಾಲಭೈರವೇಶ್ವರ ಭಜನಾ ಮಂಡಳಿ ಸದಸ್ಯರು ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು. ಚನ್ನರಾಯಪಟ್ಟಣದ ಹರಿಕಥಾ ವಿದ್ವಾನ್ ಲೋಕೇಶ್ ದಾಸ್ ಅವರು ವಚನ ಗಾಯನ ಮಾಡಿದರು. ಸಂಸ್ಕೃತ ಉಪನ್ಯಾಸಕ ಲಕ್ಷ್ಮೀನಾರಾಯಣ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಭಾಗ್ಯಲಕ್ಷ್ಮೀ ಪ್ರಾರ್ಥಿಸಿದರು. ಉಪನ್ಯಾಸಕ ಕೆ.ಆರ್.ಮಂಜುನಾಥ್ ಸ್ವಾಗತಿಸಿದರು. ಪ್ರಾಂಶುಪಾಲ ವಿಕ್ರಂ ದೇವ್ ಪ್ರಭು ವಂದಿಸಿದರು.

ಏಷ್ಯಾ ಫ್ಲೋರ್‌ಬಾಲ್ ಚಾಂಪಿಯನ್‌ಶಿಪ್‌ಗೆ ಜಿಲ್ಲೆಯ ಟಿ.ಟಿ.ಅವಿನಾಶ್ ಆಯ್ಕೆ

ಹಾಸನ: ಏಷ್ಯಾ ಓಶಿಯಾನಿಯ ಫ್ಲೋರ್ ಬಾಲ್ ಚಾಂಪಿಯನ್‌ಶಿಪ್‌ಗೆ ಸ್ಥಳೀಯ ಪ್ರತಿಭೆ ಟಿ.ಟಿ. ಅವಿನಾಶ್ ಆಯ್ಕೆಯಾಗಿದ್ದು, ಸ್ಪರ್ಧೆ ನಡೆಸಲಿದ್ದಾರೆ ಎಂದು ವಕೀಲರ ಸಂಘದ ಮಾಜಿ ಅಧ್ಯಕ್ಷ ಬಿ.ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕು ತಂಬಲಗೇರಿ ಗ್ರಾಮದ ಟಿ.ಎಸ್.ತಮ್ಮೇಗೌಡ ಮತ್ತು ಸುನಂದ ಎಂಬುವವರ ಪುತ್ರ ಟಿ.ಟಿ.ಅವಿನಾಶ್ ಅವರಿಗೆ ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ಜುಲೈ 1ರಿಂದ 6ರವರೆಗೆ ನಡೆಯಲಿರುವ ಮೊದಲ ಏಷ್ಯಾ ಓಶಿಯಾನಿಯ ಫ್ಲೋರ್ ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ಅವಕಾಶ ಲಭಿಸಿದೆ. ಇದೊಂದು ಹೆಮ್ಮೆಯ ಸಂಗತಿ ಎಂದರು.

ಒಂದು ಕುಗ್ರಾಮದಲ್ಲಿ ಜನಿಸಿರುವ ಇವರು ವಿದೇಶಗಳಲ್ಲಿ ಜನಪ್ರಿಯವಾಗಿರುವ ಕ್ರೀಡೆಯಲ್ಲಿ ಆಸಕ್ತಿ ತೋರಿ ಮುನ್ನುಗ್ಗುವ ಮೂಲಕ ನಮ್ಮ ದೇಶದ ಗೌರವವನ್ನು ಎತ್ತಿ ಹಿಡಿಯುತ್ತಿದ್ದಾರೆ. ಕಳೆದ 2 ವರ್ಷಗಳಿಂದ ಫ್ಲೋರ್ ಬಾಲ್ ಕ್ರೀಡೆಯಲ್ಲಿ ತೊಡಗುವ ಮೂಲಕ 2016ರಲ್ಲಿ ನಡೆದ ಪಂದ್ಯಾವಳಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಇದೀಗ ಮೊದಲ ಬಾರಿಗೆ ರಾಷ್ಟ್ರ ತಂಡಕ್ಕೆ ಆಯ್ಕೆ ಆಗುವ ಮೂಲಕ ರಾಜ್ಯ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಅವರು ಹೊರ ದೇಶಗಳಲ್ಲಿ ಭಾಗವಹಿಸಿ ದೇಶಕ್ಕೆ ಒಳ್ಳೆಯ ಹೆಸರು ತರಲಿ ಎಂದು ಹಾರೈಸಿದರು.

ಪತ್ರಿಕಾಗೋಷ್ಠಿಯಲ್ಲಿ ಕ್ರೀಡಾಪಟು ಟಿ.ಟಿ.ಅವಿನಾಶ್, ಪೋಷಕರಾದ ಟಿ.ಎಸ್.ತಮ್ಮೇಗೌಡ ಮತ್ತು ಸುನಂದ, ಸಹೋದರಿ ಪ್ರಿಯಾ ಹಾಗೂ ಚಂದನ್ ಉಪಸ್ಥಿತರಿದ್ದರು.

ನಾಳೆ ಶಂಕರ ಮಠ ಶಾಖೆ ಕಟ್ಟಡದ ಭೂಮಿ ಪೂಜೆ

ರಾಮನಾಥಪುರ : ಇಲ್ಲಿಯ ಕಾವೇರಿ ನದಿ ದಂಡೆಯಲ್ಲಿರುವ ರಾಮೇಶ್ವರಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಶೃಂಗೇರಿ ಶ್ರೀ ಶಂಕರ ಮಠ ಶಾಖೆ, ದಕ್ಷಿಣಾಮ್ನಾಯ ಶ್ರೀ ಶಾರದ ಪೀಠ, ಶ್ರೀ ಭಾರತೀತೀರ್ಥ ಕೃಪ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಜೂ.12ರಂದು ಸೋಮವಾರ ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ .

ಶೃಂಗೇರಿ ಶ್ರೀಮಠದ ಆಡಳಿತಾಧಿಕಾರಿ ಡಾ. ವಿ.ಆರ್.ಗೌರಿಶಂಕರ್ ಭೂಮಿ ಪೂಜೆ ನೆರವೇರಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ವಿಧಾನ ಪರಿಷತ್ ಸದಸ್ಯ ಕೆ.ವಿ. ನಾರಾಯಣಸ್ವಾಮಿ, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಕೇಶವನಾರಾಯಣ, ನಿವೃತ್ತ ನ್ಯಾಯಾಧೀಶ ಎ.ವಿ.ಚಂದ್ರಶೇಖರಯ್ಯ, ಛೇರ್‌ಮನ್ ಎ.ರಾಮಸ್ವಾಮಿ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

'ಸಂಸ್ಕೃತ ಭಾಷೆ ಸಂರಕ್ಷಿಸಲು ಸಂಕಲ್ಪ ತೊಡಿ'

ಶ್ರವಣಬೆಳಗೊಳ: ವಿದ್ಯಾರ್ಥಿಗಳು ಐಚ್ಛಿಕ ವಿಷಯವನ್ನಾಗಿ ಸಂಸ್ಕೃತ ಭಾಷೆಯನ್ನು ತೆಗೆದುಕೊಳ್ಳಬೇಕು. ಸಂಸ್ಕೃತದ ಶ್ಲೋಕಗಳನ್ನು ಪಠಿಸುವುದರಿಂದ ಉಚ್ಛಾರಣೆ ಶುದ್ಧವಾಗುತ್ತದೆ. ಈ ಭಾಷೆಯ ಸಂರಕ್ಷಣೆ, ಅಭಿವೃದ್ಧಿಗಾಗಿ ಮತ್ತು ಜನರ ಭಾಷೆಯಾಗಿ ಪ್ರಚಾರವಾಗಲು ನಾವೆಲ್ಲರೂ ಶ್ರಮಿಸುವುದಾಗಿ ಸಂಕಲ್ಪ ತೊಡಬೇಕು ಎಂದು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ತಿಳಿಸಿದರು.

ಕಳೆದ 3 ದಿನಗಳಿಂದ ಪಟ್ಟಣದ ಚಾವುಂಡರಾಯ ಸಭಾ ಮಂಟಪದಲ್ಲಿ ಆಯೋಜಿಸಿದ್ದ ಅಖಿಲ ಭಾರತೀಯ ಸಂಸ್ಕೃತ ವಿದ್ವತ್ ಸಮ್ಮೇಳನದ ಸಮಾರೋಪ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಸಂಸ್ಕೃತ ಭಾರತಿ ಸಹಯೋಗದೊಂದಿಗೆ ವಿದ್ವತ್ ಸಮ್ಮೇಳನ ಯಶಸ್ವಿಯಾಗಿ ನೆರವೇರಿದೆ ಎಂದರು.

ಅಖಿಲ ಭಾರತೀಯ ಸಂಸ್ಕೃತ ವಿದ್ವತ್ ಸಮ್ಮೇಳನದಲ್ಲಿ ಮಂಡನೆಯಾದ 35 ವಿಷಯಗಳನ್ನು ಗ್ರಂಥದ ರೂಪದಲ್ಲಿ ಮಹಾಮಸ್ತಕಾಭಿಷೇಕ ವೇಳೆಗೆ ಪ್ರಕಟಣೆ ಮಾಡಲಾಗುವುದು ಎಂದು ನುಡಿದರು.

ಸಂಸ್ಕೃತ ಭಾಷೆಯು ಸರಳ, ಸುಂದರ, ಸುಲಭ ಎಂಬುದನ್ನು ಈ ಸಮ್ಮೇಳನದಿಂದ ತಿಳಿದಂತಾಗಿದೆ. 10ನೇ ಶತಮಾನದಲ್ಲಿ ಕನ್ನಡದ ಆದಿಕವಿ ಪಂಪ ಆದಿಪುರಾಣದಲ್ಲಿ ಬಾಹುಬಲಿಯ ವರ್ಣನೆಯನ್ನು ಅದ್ಭುತವಾಗಿ ಮಾಡಿದ್ದಾನೆ. ಅದಕ್ಕೂ ಮೊದಲು ಸಂಸ್ಕೃತ ಸಾಹಿತ್ಯದಲ್ಲಿ ಬಾಹುಬಲಿಯ ಬಗ್ಗೆ ವಿಸ್ತೃತ ವರ್ಣನೆ ಇದೆ. ಸಂಸ್ಕೃತ ವಿದ್ವಾಂಸರನ್ನು ಗೌರವಿಸಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಉತ್ತರಾಖಂಡ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ॥ಪಿಯೂಷ್ ದೀಕ್ಷಿತ್ ಮಾತನಾಡಿ, ಶ್ರೇಷ್ಠರಾದವರು ಯಾವುದನ್ನು ಆಚರಿಸುತ್ತಾರೋ ಅದನ್ನು ಎಲ್ಲರೂ ಆಚರಿಸುತ್ತಾರೆ. ಹಾಗೆಯೇ ನಾವೂ ಸಹ ಸಮಾಜಕ್ಕೆ ಉತ್ತಮ ಕಾರ್ಯಗಳನ್ನು ಮಾಡಬೇಕು. ಆಗ ಉಳಿದವರು ನಮ್ಮನ್ನು ಅನುಸರಿಸುತ್ತಾರೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಪ್ರೊ॥ಉಪೇಂದ್ರರಾವ್ ಮಾತನಾಡಿ, ಶ್ರವಣ ಸಂಸ್ಕೃತಿಯ ಪ್ರತೀಕವಾದ ಶ್ರವಣಬೆಳಗೊಳದಲ್ಲಿ ನಡೆದ ಈ ಸಂಸ್ಕೃತ ಸಮ್ಮೇಳನವು ಎಲ್ಲಾ ವಿದ್ವಾಂಸರಲ್ಲಿ ಚೈತನ್ಯ ತುಂಬಿಸಿದೆ. ಎಲ್ಲಾ ಧರ್ಮಗಳಲ್ಲೂ ಹಿಂಸೆ ಮಾಡಬೇಡಿ ಎಂದು ಹೇಳಿದೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ವಿದ್ವಾನ್ ಎಸ್.ಕೃಷ್ಣಾನಂದಜಿ ವೈದಿಕ ಮಂಗಲಾಚರಣೆ ಮಾಡಿದರು. ದೆಹಲಿಯ ಇಂದೂ ಜೈನ್ ಸರಸ್ವತಿ ವಂದನೆಯನ್ನು , ಸಂಸ್ಕೃತ ಮಂಗಲಾಚರಣೆಯನ್ನು ಡಾ॥ಅರಿಹಂತ ಕುಮಾರ್ ಜೈನ್ ಮಾಡಿದರು. ಸಂಸ್ಕೃತ ಭಾರತೀಯ ಪುಸ್ತಕ ಪ್ರದರ್ಶನದ ಮುಖ್ಯ ರೂವಾರಿಗಳಾದ ಚನ್ನರಾಯಪಟ್ಟಣದ ವಿಶ್ವನಾಥ್ ದೀಕ್ಷಿತ್‌ರವರಿಗೆ ಸಮ್ಮೇಳನದ ವತಿಯಿಂದ ಸನ್ಮಾನಿಸಲಾಯಿತು. ಮುಖ್ಯ ಸಂಯೋಜಕ ಪ್ರೊ॥ ಫೂಲ್‌ಚಂದ್ ಜೈನ್, 3 ದಿನ ನಡೆದ ಸಮ್ಮೇಳನದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು.

(-4ನೇ ಪುಟಕ್ಕೆ)

ಉತ್ತರಕ್ರಿಯಾರಾಧನೆಗೆ ಆಹ್ವಾನ



ಶ್ರೀ ಎಂ.ಪಿ.ರಾಜಕುಮಾರ್
ಜನನ:06-02-1963 ನಿಧನ: 31-05-2017

ಹಾಸನದ ವಿದ್ಯಾನಗರದಲ್ಲಿ ವಾಸವಿರುವ
ಶ್ರೀಮತಿ ರತ್ನ ರಾಜಕುಮಾರ್ ಮಾಡುವ ವಿಜ್ಞಾಪನೆಗಳು
ದಿ. 31-05-2017ನೇ ಬುಧವಾರ ನನ್ನ ಪೂಜ್ಯ ಪತಿಯವರಾದ
ಶ್ರೀ ಎಂ.ಪಿ. ರಾಜಕುಮಾರ್
ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ.
ತತ್ಸಂಬಂಧವಾದ "**ಉತ್ತರ ಕ್ರಿಯಾದಿ**" ಯನ್ನು
ದಿ. 11-06-2017ನೇ ಭಾನುವಾರ ಮಧ್ಯಾಹ್ನ 1-00 ಗಂಟೆಗೆ
ಕುಂಟಪ್ಪ ಮೆಮೋರಿಯಲ್ ಹಾಲ್, **ಡಾಂಗೆ ಆಸ್ಪತ್ರೆ, ಹಿಂಭಾಗ**,
ಎಂ.ಜಿ.ರಸ್ತೆ,ಹಾಸನ ಇಲ್ಲಿ ನಡೆಸಲು ಗುರು ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ
ಚಿರಶಾಂತಿಯನ್ನು ಬಯಸಬೇಕಾಗಿ ಕೋರುವ,

ದುಃಖಭಾಗಿಗಳು:
ಎಂ.ಆರ್. ಪ್ರಾರ್ಥನಾ ರಾಜ್
ಹಾಗೂ ಬಂಧು-ಮಿತ್ರರು

ತಮ್ಮ ವಿಶ್ವಾಸಿ : **ಶ್ರೀಮತಿ ರತ್ನ ರಾಜಕುಮಾರ್**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.